# ಕೆ-ಟರ್ಟಲ್ ನ ವಿವರಣಾ ಪತ್ರ

(ಕೇವಲ ಲಿನಕ್ಸ್ ಗಾಗಿ)

ಸ್ಪೋಕನ್ ಟ್ಯುಟೋರಿಯಲ್ ಟೀಮ್

ಐ. ಐ. ಟಿ. ಬಾಂಬೆ

## 1. ಆನ್ಲೈನ್ / ಆಫ್ಲೈನ್ ವಿಷಯಗಳು.

1. ಸ್ಪೋಕನ್ ಟ್ಯುಟೋರಿಯಲ್ ನ ವಿಷಯಗಳನ್ನು ನೀವು ಆನ್ಲೈನ್ ನಲ್ಲಿ ಈ ಕೆಳಗಿನ ಲಿಂಕ್ ನಿಂದ ಪಡೆಯಬಹುದು. http://spoken-tutorial.org/tutorial-search/
2. ನೀವು ಸ್ಪೋಕನ್ ಟ್ಯುಟೋರಿಯಲ್ ನ ವಿಷಯಗಳನ್ನು ಈ ಕೆಳಗಿನ ಲಿಂಕ್ ನ ಮೂಲಕ ಡೌನ್ಲೋಡ್ ಮಾಡಿ ಆಫ್ಲೈನ್ ಕೂಡಾ ಕಲಿಯಬಹುದು. http://spoken-tutorial.org/cdcontent/
3. ಈ ಲಿಂಕ್ ನ ಮೂಲಕ ನೀವು FOSS ನ ವಿಭಾಗಗಳನ್ನು ನಿಮ್ಮ ಭಾಷೆಯಲ್ಲಿ ಡೌನ್ಲೋಡ್ ಮಾಡಬಹುದು.
4. ಈ ವಿಭಾಗಗಳು zip ಫೈಲ್ ನ ರೂಪದಲ್ಲಿ ಡೌನ್ಲೋಡ್ ಆಗುತ್ತದೆ.
5. ಆ zip ಫೈಲ್ ಅನ್ನು ಎಕ್ಸ್ಟ್ರಾಕ್ಟ್ ಮಾಡಿ ಒಳಗಿನವುಗಳನ್ನು ನೋಡಬಹುದು.

## 2. ಅಭ್ಯಾಸಕ್ಕಾಗಿರುವ ಪ್ರಕ್ರಿಯೆಗಳು.

1. ನಿಮಗೆಲ್ಲರಿಗೂ ಸ್ಪೋಕನ್ ಟ್ಯುಟೋರಿಯಲ್ ಗಳ ಸೆಟ್ ಅನ್ನು ಹಾಗೂ ಫೈಲ್ ಗಳನ್ನು ನೀಡಲಾಗಿದೆ.
2. ನೀವು ಸಾಮಾನ್ಯವಾಗಿ ಒಂದು ಬಾರಿ ಒಂದು ಟ್ಯುಟೋರಿಯಲ್ ಅನ್ನು ಮಾಡುತ್ತೀರಿ
3. ನೀವು ಸ್ಪೋಕನ್ ಟ್ಯುಟೋರಿಯಲ್ ಅನ್ನು ಕೇಳಬಹುದು ಹಾಗೂ ಅದರಲ್ಲಿ ಹೇಳಿರುವ ಎಲ್ಲಾ ಕಮಾಂಡ್ ಗಳನ್ನು ಪುನಃ ಚಲಾಯಿಸಬಹುದು.
4. ಹೀಗೆ ಮೇಲೆ ಹೇಳಿದ್ದನ್ನು ಮಾಡುವಾಗ ಕಷ್ಟಗಳು ಎದುರು ಬಂದರೆ, ಒಮ್ಮೆ ಆ ಟ್ಯುಟೋರಿಯಲ್ ಅನ್ನು ಸಂಪೂರ್ಣವಾಗಿ ಕೇಳಿಸಿಕೊಂಡು ಅನಂತರ ಎರಡನೇ ಬಾರಿ ಕೇಳುವಾಗ ಅವುಗಳ ಅಭ್ಯಾಸವನ್ನು ಮಾಡಬಹುದು.

## 3. ಕೆ-ಟರ್ಟಲ್

1. “Select FOSS Category” ಎಂಬ ಡ್ರಾಪ್ ಡೌನ್ ಅನ್ನು ಕ್ಲಿಕ್ ಮಾಡಿ ಹಾಗೂ ಅಲ್ಲಿ "KTurtle" ಅನ್ನು ಆಯ್ಕೆ ಮಾಡಿ.
2. “Select Language” ಎಂಬ ಡ್ರಾಪ್ ಡೌನ್ ಅನ್ನು ಕ್ಲಿಕ್ ಮಾಡಿ ನಿಮಗೆ ಬೇಕಾದ ಭಾಷೆಯನ್ನು ಆರಿಸಿಕೊಳ್ಳಿ.
3. “Submit” ಎಂಬ ಬಟನ್ ಅನ್ನು ಕ್ಲಿಕ್ ಮಾಡಿ.
4. ನೀವು ನಿಮ್ಮ ಆಯ್ಕೆಗೆ ತಕ್ಕಂತೆ ಟ್ಯುಟೋರಿಯಲ್ ಗಳ ಸೂಚಿಯನ್ನು ನೋಡುವಿರಿ.
5. ಕಾಣುತ್ತಿರುವ ಸೂಚಿಯಲ್ಲಿನ ಮೊದಲ ಟ್ಯುಟೋರಿಯಲ್ ನಿಂದ ಪಾಠವನ್ನು ಆರಂಭಿಸಿ.

## 4. ಮೊದಲ ಟ್ಯುಟೋರಿಯಲ್ - Introduction

1. ದಯವಿಟ್ಟು "Introduction" ಎಂಬುದನ್ನು ಹುಡುಕಿ.
2. ವಿಡಿಯೋ ವನ್ನು ನೋಡಲು ವೀಡಿಯೋ ಪ್ಲೇಯರ್ ಐಕಾನ್ ನ ಮೇಲೆ ಕ್ಲಿಕ್ ಮಾಡಿ.
3. ಟ್ಯುಟೋರಿಯಲ್ ನ ಔಟ್ಲೈನ್ ಹಾಗೂ ಪೂರ್ವಾಪೇಕ್ಷಿತವು ಪ್ಲೇಯರ್ ನ ಬಲಭಾಗದಲ್ಲಿ ಲಭ್ಯವಿರುತ್ತದೆ.
4. ಅಸೈನ್ಮೆಂಟ್ ಗಳು ಹಾಗೂ ಕೋಡ್ ಫೈಲ್ ಗಳು ಪ್ಲೇಯರ್ ನ ಕೆಳಭಾಗದಲ್ಲಿಸಿಗುತ್ತವೆ.
5. ಕಲಿಕೆಯ ಜೊತೆಗೇ ಅಭ್ಯಾಸವನ್ನೂ ಮಾಡಲು ಬೇಕಾದಂತೆ ಬ್ರೌಸರ್ ಅನ್ನು ವ್ಯವಸ್ಥಿತಗೊಳಿಸಿ.
6. ಈ ಟ್ಯುಟೋರಿಯಲ್ ಗಳನ್ನು ಉಬಂಟು ಲಿನಕ್ಸ್ ನ ೧೦.೦೪ ನೇ ಆವೃತ್ತಿ ಹಾಗೂ ೧೧.೧೦ ನೇ ಆವೃತ್ತಿ ಗಳನ್ನು ಬಳಸಿ ರಚಿಸಲಾಗಿದೆ. ಹೀಗಾಗಿ ನೀವು ಟ್ಯುಟೋರಿಯಲ್ ಗಳಲ್ಲಿ ಕೆ-ಟರ್ಟಲ್ ಅನ್ನು ಓಪನ್ ಮಾಡಲು ಬೇರೆ ಬೇರೆ ತರಹನಾದ ನಿರ್ದೇಶಗಳನ್ನು ನೋಡಬಹುದು.

### 4.0.1. ಉಬಂಟು ಲಿನಕ್ಸ್ ಆಪರೇಟಿಂಗ್ ಸಿಸ್ಟಮ್ ನಲ್ಲಿ ಕೆ-ಟರ್ಟಲ್ ಅನ್ನು ತೆರೆಯುವಿಕೆ.

a) ಉಬಂಟು ಲಿನಕ್ಸ್ ೧೧.೦೪ ರಲ್ಲಿ, ಕ್ರಮವಾಗಿ Applications>>Education>>KTurtle ಎಂಬುದರ ಮೇಲೆ ಕ್ಲಿಕ್ ಮಾಡಿ.

b) ಉಬಂಟು ಲಿನಕ್ಸ್ ೧೧.೧೦ ರಲ್ಲಿ, ಕ್ರಮವಾಗಿ Dash Home>>Media Apps>> ಮೇಲೆ ಕ್ಲಿಕ್ ಮಾಡಿ ಅನಂತರ Education ಎಂಬ ಟೈಪ್ ನ ಅಡಿಯಲ್ಲಿ KTurtle ಎಂಬುದರ ಮೇಲೆ ಕ್ಲಿಕ್ ಮಾಡಿ.

c) ಉಬಂಟು ಲಿನಕ್ಸ್ ೧೨.೦೪ ರಲ್ಲಿ Dash Home ನ

ಮೇಲೆ ಕ್ಲಿಕ್ ಮಾಡಿ; ಅಲ್ಲಿ ಒಂದು ಸರ್ಚ್ ಬಾರ್ ಕಾಣುತ್ತದೆ, ಅಲ್ಲಿ KTurtle ಎಂದು ಟೈಪ್ ಮಾಡಿ. ಅನಂತರ KTurtle ಎಂಬುದರ ಮೇಲೆ ಕ್ಲಿಕ್ ಮಾಡಿ.

d) ಟ್ಯುಟೋರಿಯಲ್ ನಲ್ಲಿ 0:46 ರಿಂದ 1:13 ರ ತನಕ KTurtle ಅನ್ನು ಹೇಗೆ ತೆರೆಯುವುದೆಂದು ವಿವರಿಸಲಾಗಿದೆ.

e) ನಿಮಗೆ KTurtle ಅನ್ನು ತೆರೆಯಲು ಸಾಧ್ಯವಾಗದಿದ್ದಲ್ಲಿ ಟರ್ಮಿನಲ್ ಗೆ ಹೋಗಿ.

f) ಹಾಗೆ ಮಾಡಲು Ctrl, Alt ಹಾಗೂ t ಕೀಗಳನ್ನು ಒಟ್ಟಿಗೇ ಒತ್ತಿ.

g) ಟರ್ಮಿನಲ್ ನಲ್ಲಿ KTurtle ಎಂದು ಟೈಪ್ ಮಾಡಿ Enter ಒತ್ತಿ. ಇದರಿಂದಾಗಿ KTurtle ತೆರೆದುಕೊಳ್ಳುತ್ತದೆ.

### 4.1 ಟ್ಯುಟೋರಿಯಲ್ ಗಳ ಅಭ್ಯಾಸಕ್ಕಾಗಿ ಸಾಮಾನ್ಯ ಸೂಚನೆಗಳು.

a. ನಿಮ್ಮ ಡೆಸ್ಕ್‌ಟಾಪ್ ನಲ್ಲಿ “Name-RollNo-Component”ಎಂಬೀ ಕ್ರಮದಲ್ಲಿರುವ ಹೆಸರಿನ ಒಂದು ಫೋಲ್ಡರ್ ಅನ್ನು ರಚಿಸಿ. (ಉದಾ: madhuri-04-KTurtle)

b. ನೀವು ನಿಮ್ಮ ಫೋಲ್ಡರ್ ನಲ್ಲಿ ಸೇವ್ ಮಾಡುವ ಫೈಲ್ ಗಳಿಗೆ ವಿಶಿಷ್ಟವಾದ ಹೆಸರನ್ನಿಡಿ. ಇದರಿಂದಾಗಿ ನೀವು ನಿಮ್ಮ ಫೈಲ್ ಅನ್ನು ಸುಲಭವಾಗಿ ಗುರುತಿಸಬಹುದು. (ಉದಾ: Practice-1-madhuri)

c. ನಿಮ್ಮ ಎಲ್ಲಾ ಕೆಲಸಗಳನ್ನು ನಿಮ್ಮ ಡೈರಕ್ಟರಿಯಲ್ಲಿ ಸೇವ್ ಮಾಡಲು ಮರೆಯದಿರಿ.

d. ಇದರಿಂದಾಗಿ ನಿಮ್ಮ ಫೈಲ್ ಗಳು ಬೇರೆಯಾರಿಂದಲೂ ಓವರ್ ರೈಟ್ ಆಗುವುದಿಲ್ಲ.

e. ನಿಮ್ಮ ಕೆಲಸವನ್ನು ಕೊನೆಯಲ್ಲಿ ಸೇವ್ ಮಾಡುವ ಬದಲಿಗೆ ಆಗಾಗ ಸೇವ್ ಮಾಡುವ ಅಭ್ಯಾಸವಿರಿಸಿಕೊಳ್ಳಿ.

### 4.2 ನಿಯತಕಾರ್ಯಕ್ಕಾಗಿ ಸಾಮಾನ್ಯ ಸೂಚನೆಗಳು.

a. ಟ್ಯುಟೋರಿಯಲ್ ನಲ್ಲಿ ಕೊಟ್ಟಿರುವ ಎಲ್ಲಾ ನಿಯತಕಾರ್ಯಗಳನ್ನೂ ಪೂರ್ಣಗೊಳಿಸಿ.

b. ನಿಮ್ಮ ಎಲ್ಲಾ ನಿಯತಕಾರ್ಯಗಳನ್ನೂ ಫೋಲ್ಡರ್ ನಲ್ಲಿ ರಕ್ಷಿಸಿ.

### 4.3 ಕೋಡ್ ಫೈಲ್ ಗಳನ್ನು ಬಳಸಲಿರುವ ಸಾಮಾನ್ಯ ಸೂಚನೆಗಳು.

a. ವೀಡಿಯೋ ಪ್ಲೇಯರ್ ನ ಕೆಳಭಾಗದಲ್ಲಿರುವ "Code files" ಎಂಬ ಲಿಂಕ್ ನ ಮೇಲೆ ಕ್ಲಿಕ್ ಮಾಡಿ ಅದನ್ನು ನಿಮ್ಮ ಫೋಲ್ಡರ್ ನಲ್ಲಿ ಸೇವ್ ಮಾಡಿ.

b. ಡೌನ್ಲೋಡ್ ಮಾಡಿದ zip ಫೈಲ್ ಅನ್ನು ಎಕ್ಸ್‌ಟ್ರಾಕ್ಟ್ ಮಾಡಿ.

c. ನೀವು ಇಲ್ಲಿ ಈ ಟ್ಯುಟೋರಿಯಲ್ ಗೆ ಬಳಸಿದ ಎಲ್ಲಾ code/source ಫೈಲ್ ಗಳನ್ನು ನೋಡುವಿರಿ.

d. ಆ ಫೈಲ್ ಗಳನ್ನು ಟ್ಯುಟೋರಿಯಲ್ ನಲ್ಲಿ ಹೇಗೆ ಸೂಚಿಸಿರುವರೋ ಹಾಗೆ ಉಪಯೋಗಿಸಿ.

1. ಎಲ್ಲಾ ಟ್ಯುಟೋರಿಯಲ್ ಗಳನ್ನು ಪ್ಲೇ ಮಾಡಿ, ನಿಲ್ಲಿಸಿ ಮತ್ತು ಅಭ್ಯಾಸ ಮಾಡಿ.
2. ಟ್ಯುಟೋರಿಯಲ್ ಮುಗಿದ ಮೇಲೆ ಮುಂದಿನ ಟ್ಯುಟೋರಿಯಲ್ ಅನ್ನು ಪ್ಲೇಯರ್ ನ ಕೆಳಗಡೆ ಬಲಭಾಗದಲ್ಲಿರುವ ಸೂಚಿಯಿಂದ ಆಯ್ಕೆ ಮಾಡಿ.
3. ಅಲ್ಲಿರುವ ಎಲ್ಲಾ ಸೂಚನೆಗಳನ್ನು ಅನುಸರಿಸಿ ಹಾಗೂ ಆ ಸರಣಿಯ ಎಲ್ಲಾ ಟ್ಯುಟೋರಿಯಲ್ ಗಳನ್ನೂ ಮುಗಿಸಿ.